# ಫೋನ್‌ನಲ್ಲೇ ಫಿಲ್ಮ್!



**ಕೊರೊನಾ ವೈರಾಣು ತನ್ನ ಕಬಂಧಬಾಹುಗಳನ್ನು ಜಗತ್ತಿಗೇ ಚಾಚಿದೆ. ಆ ಆತಂಕದ ನಡುವೆಯೇ ಸೃಜನಶೀಲತೆಯ ಚಿಗುರುಗಳು ಮೊಳೆಯುತ್ತಿವೆ. ಹಾಲಿವುಡ್‌ನಲ್ಲಿ ಸಿನಿಮಾ ಮಾಡುವ ತಮ್ಮ ಕನಸಿಗೆ ಕೊರೊನಾ ತಡೆಗೋಡೆಯಾದಾಗ ಅದನ್ನು ಐಫೋನ್ ಎಂಬ ಏಣಿ ಬಳಸಿ ದಾಟಿದ ಕುತೂಹಲಕಾರಿ ಕತೆ ಇಲ್ಲಿದೆ.**

■ ಸುಮನಾ ಕೆ.

**‘ಅಮಿಸ್ಟ್ ಮೈ ಓನ್’**

ಇದು ಬರೀ ಸಿನಿಮಾ ಹೆಸರಷ್ಟೇ ಆಗಿರಲಿಲ್ಲ. ಆ ಹುಡುಗರ ಬಹುದಿನಗಳ ಕನಸಿನ ಹೆಸರೂ ಆಗಿತ್ತು. ಅದು ಸಾಮಾನ್ಯ ಕನಸಾಗಿರಲಿಲ್ಲ. ಹಾಲಿವುಡ್ ನೆಲದಲ್ಲಿ ಭಾರತದ ಕಂಪಿನ ಸಸಿ ನೆಡುವ ಬಹು ದುಬಾರಿ ಕನಸು.

ಅವರೆಲ್ಲರೂ ಭಾರತೀಯರೇ. ಸಿನಿಮಾ ಅವರ ಎದೆಯ ಬಡಿತದ ಹೆಸರೂ ಹೌದು. ಎಷ್ಟೆಲ್ಲ ಕಷ್ಟಪಟ್ಟು ಸಿನಿಮಾ ಮಾಡಲು ಹೊರಟವರಿಗೆ ಎದುರಾದ ತಡೆ ಕೊರೊನಾ. ಅಷ್ಟರಲ್ಲಿಯೇ ಅರ್ಧ ಸಿನಿಮಾದ ಚಿತ್ರೀಕರಣ ಮುಗಿದಿತ್ತು. ಕನಸಿನ ನಕ್ಷತ್ರ ಕೈತಾಗಿದಂತಾಗಿ ತಪ್ಪಿ ಹೋಗುತ್ತಿರುವ ಹತಾಶೆ ಇಡೀ ತಂಡದವರಲ್ಲಿ ತುಂಬಿಕೊಂಡಿತ್ತು. ಆಗಲೇ ಆ ಚಿತ್ರದ ಛಾಯಾಗ್ರಾಹಕ ತಮ್ಮ ಕಿಸೆಯಿಂದ ಐಫೋನ್ ತೆಗೆದರು. ಅದು ಯಾರಿಗೋ ಕಾಲ್ ಮಾಡಿ ದುಃಖ ತೋಡಿಕೊಳ್ಳಲಿಕ್ಕಲ್ಲ. ಎಲ್ಲ ಕಡೆ ಬಾಗಿಲು ಮುಚ್ಚಿದಂತಿದ್ದ ಪರಿಸ್ಥಿತಿಗೆ ಯಾವುದಾದರೂ ಕಿಂಡಿಯಿಂದ ಬೆಳಕು ಹಾಯಿಸಲು ಸಾಧ್ಯವೇ ಎಂಬ ಪ್ರಯತ್ನ ಅದಾಗಿತ್ತು. ಮುಂದೆ ‘ಅಮಿಸ್ಟ್ ಮೈ ಓನ್’ ಚಿತ್ರದ ನಿರ್ದೇಶಕ ಋತುರಾಜ್ ದಲ್ಗಡೆ ಮತ್ತು ಛಾಯಾಗ್ರಾಹಕ ಕಲ್ಪಕ್ ಪಾಠಕ್ ಹೊಂದಾಣಿಕೆಯಲ್ಲಿ ಹೊಸ ಸಾಧ್ಯತೆಯ ಹೆಬ್ಬಾಗಿಲೇ ತೆರೆದುಕೊಂಡಿತು. ಅದು ಐಫೋನ್‌ನಲ್ಲಿ ಚಿತ್ರೀಕರಣ ನಡೆಸುವ ಸಾಧ್ಯತೆ.

ಸದಾ ಪ್ರವಾಸಿಗರಿಂದ ಗಿಜಿಗುಡುವ ಅಮೆರಿಕದ ಪ್ರಸಿದ್ಧ ಹಾಲಿವುಡ್ ಬುಲೆವಾರ್ಡ್‌ನಲ್ಲಿ ಕೊರೊನಾ ಕಾರಣದಿಂದ ಜನರ ಸಂಖ್ಯೆ ಕಡಿಮೆಯಾಗಿರುವುದು ಕೂಡ ಅವರ ಚಿತ್ರದ ಶೂಟಿಂಗ್‌ಗೆ ವರದಾನವಾಯಿತು.

ಕೊರೊನಾ ಕಾರಣದಿಂದ ಅರ್ಧಕ್ಕೆ ನಿಲ್ಲಿಸಿದ್ದ ಚಿತ್ರೀಕರಣವನ್ನು ಫೋನ್‌ನಲ್ಲಿ ಚಿತ್ರೀಕರಿಸಿ ಹೊಸ ಭಾಷ್ಯ ಬರೆದ ಕಲ್ಪಕ್ ಮುಂಬೈನವರು. ಸದ್ಯ ಲಾಸ್ ಏಂಜಲೀಸ್‌ನಲ್ಲಿ ನೆಲೆಸಿರುವ ಅವರು, ಹಾಲಿವುಡ್‌ನಲ್ಲಿ ಸಿನಿಮಾಟೋಗ್ರಾಫರ್ ಆಗಿ ಗುರುತಿಸಿಕೊಂಡಿದ್ದಾರೆ. ಅವರು ಹೊಸ ಚಿತ್ರವನ್ನು ಐಫೋನ್ 11 ಪ್ರೋದಲ್ಲಿ ಸಿನಿಮಾವನ್ನು ಚಿತ್ರೀಕರಿಸಿರುವುದು ವಿಶೇಷ.

‘ಈ ಸಿನಿಮಾ ಚಿತ್ರೀಕರಣದ ವೇಳೆ ಅಮೆರಿಕದಲ್ಲಿ ಕೊರೊನಾ ಸಾಂಕ್ರಾಮಿಕ ಬಿಕ್ಕಟ್ಟು ಶುರುವಾಗತೊಡಗಿತು. ಆಗ ನಾವು ನಮ್ಮ ಸಿನಿಮಾದ ಅರ್ಧ ಕೆಲಸ ಮುಗಿಸಿದ್ದೆವು. ಬಂಡವಾಳ ನಷ್ಟ ಹಾಗೂ ಐಫೋನ್‌ನಲ್ಲಿ ಸಿನಿಮಾ ಚಿತ್ರೀಕರಣ ನಡೆಸಬಹುದು ಎಂಬ ನಿರ್ದೇಶಕ ಋತುರಾಜ್ ದಲ್ಗಡೆ ಅವರ ಅಭಿಪ್ರಾಯವನ್ನು ಪಡೆದು ಮುಂದುವರಿದೆವು’ ಎಂದು ಕಲ್ಪಕ್ ವಿವರಣೆ ನೀಡುತ್ತಾರೆ.

ಸಿನಿಮಾದ ಚಿತ್ರೀಕರಣ ಈಗ ಪೂರ್ಣಗೊಂಡಿದ್ದು, 2021ರಲ್ಲಿ ಬಿಡುಗಡೆಯಾಗಲಿದೆ. ‘ಐಫೋನ್‌ನಲ್ಲಿ ಸಿನಿಮಾ ಚಿತ್ರೀಕರಿಸುವಾಗ ಕೆಲವೊಂದು ಸವಾಲುಗಳನ್ನು ಎದುರಿಸಬೇಕಾಯಿತು. ಆದರೆ ಹೊಸ ತಂತ್ರಜ್ಞಾನವನ್ನು ಉಪಯೋಗಿಸುವಾಗ ಇಂಥ ಸವಾಲುಗಳು ಸಾಮಾನ್ಯ’ ಎನ್ನುತ್ತಾರೆ ಪಾಠಕ್.

ಈ ಸಿನಿಮಾದ ಚಿತ್ರೀಕರಣವು ಪ್ರವಾಸಿಗರಿಂದ



ಜೋಕರ್ ಸಿನಿಮಾದ ಸಿನಿಮಾಟೊಗ್ರಾಫರ್ ಲಾರೆನ್ಸ್ ಜೊತೆ ಕಲ್ಪಕ್